

# ಕಟುಕನ ಪೊರಕೆ

ಹೂವು ಅಥವಾ ಹಣ್ಣುಗಳು ಸಾಮಾನ್ಯವಾಗಿ ಮರಗಿಡಗಳ ರೆಂಬೆ ಕೊಂಬೆಗಳಲ್ಲಿ ಬಿಡುತ್ತವೆ. ಆದರೆ ಎಲೆಗಳಲ್ಲಿ ಹಣ್ಣು ಬಿಡುವ ಗಿಡವಿದೆ ಎಂದರೆ ತುಸು ಅಚ್ಚರಿ ಎನ್ನಿಸುತ್ತದೆ ಅಲ್ಲವೇ? ಕಟುಕನ ಪೊರಕೆ (ಬುಚರ್ಸ್ ಬ್ರೂಮ್) ಎಂದು ಕರೆಯುವ ಈ ಗಿಡದ ವೈಜ್ಞಾನಿಕ ಹೆಸರು ರಸ್ಕಸ್ ಅಕುಲೇಟಸ್. ಇದು ಕೆಳಮಟ್ಟದಲ್ಲಿ ಬೆಳೆಯುವ ನೆಟ್ಟಗಿರುವ ಒರಟು ರೆಂಬೆ, ಬಿರುಸು ಎಲೆ ಹಾಗೂ ಸೂಜಿಯಂತೆ ಚೂಪಾಗಿರುವ ಎಲೆ ತುದಿಯನ್ನು ಹೊಂದಿರುವ ಬಹುವಾರ್ಷಿಕ ಪೊದೆ.

ವಸಂತ ಮಾಸದ ಆರಂಭದಲ್ಲಿ ಈ ಗಿಡದ ಎಲೆಗಳ ಮಧ್ಯಭಾಗದಿಂದ ಹಸಿರು ಮಿಶ್ರಿತ ಬಿಳಿ ಹೂಗಳು ಅರಳುತ್ತವೆ. ನಂತರ ಶರತ್ಕಾಲದಲ್ಲಿ ಈ ಹೂಗಳು ಹಣ್ಣುಗಳಾಗಿ ಮಾರ್ಪಾಡಾಗುತ್ತವೆ. ಕಿರಿದಾದ ತೊಟ್ಟುಳ್ಳ ಪುಟ್ಟ ಕೆಂಪನೆಯ ಹಣ್ಣು, ಹಚ್ಚ ಹಸಿರಿನ ಎಲೆ ಮೇಲೆಯೇ ಅಂಟಿಕೊಂಡಿದೆಯೇನೋ ಎಂಬಂತೆ ಬಲು ವಿಚಿತ್ರವಾಗಿ ಕಾಣುತ್ತದೆ. ಆದರೂ ಬುಚರ್ಸ್ ಬ್ರೂಮ್ ಗಿಡವು ಸಸ್ಯ ಸಾಮ್ರಾಜ್ಯದ ಯಾವ ನಿಯಮವನ್ನೂ ಉಲ್ಲಂಘಿಸಿಲ್ಲ. ಏಕೆಂದರೆ ನಾವು ಎಲೆ ಅಂತ ತಿಳಿದುಕೊಂಡಿರುವುದು ನಿಜವಾಗಿಯೂ ಮಾರ್ಪಾಡಾದ ರೆಂಬೆಗಳು. ಇವುಗಳನ್ನು ಕ್ಲಾಡೋಡ್ಸ್ ಎಂದು ಕರೆಯುತ್ತಾರೆ. ಇವು ಚಪ್ಪಟೆಯಾಗಿರುವುದಲ್ಲದೆ ಥೇಟ್ ಎಲೆಗಳಂತೆಯೇ ಕಾರ್ಯ ನಿರ್ವಹಿಸುತ್ತವೆ.

ಬುಚರ್ಸ್ ಬ್ರೂಮ್ ಗಿಡಗಳು ಇರಾನ್ ನಿಂದ ಮೆಡಿಟರೇನಿಯನ್ ಹಾಗೂ ಅಮೆರಿಕದ ದಕ್ಷಿಣ ಭಾಗದಲ್ಲಿ ವ್ಯಾಪಕವಾಗಿ ಕಂಡುಬರುತ್ತವೆ. ಇದನ್ನು 2000ಕ್ಕೂ ಹೆಚ್ಚು ವರ್ಷಗಳಿಂದ ವಿರೇಚಕ ಹಾಗೂ ಮೂತ್ರವರ್ಧಕವನ್ನಾಗಿ ಉಪಯೋಗಿಸುತ್ತಿದ್ದಾರೆ. ಮೂಲವ್ಯಾಧಿ, ಉಬ್ಬಿರುವ ರಕ್ತನಾಳ ಬಾವುಗಳ ತೊಂದರೆಗಳನ್ನು ನಿವಾರಿಸಲು ಈ ಗಿಡವನ್ನು ಬಳಸುತ್ತಾರೆ.

ಕಟುಕರ ಪೊರಕೆಯ ಸಾರವನ್ನು ಬಹಳ ಕಾಲದಿಂದ ಉಪಯೋಗಿಸುತ್ತಿದ್ದರೂ ಸಾಮಾನ್ಯರಿಗೆಲ್ಲ ಇದರ ಔಷಧೀಯ ಗುಣದ ಮಹತ್ವ ಗೊತ್ತಾಗಿದ್ದು ಕಳೆದ ಶತಮಾನದಲ್ಲಿ.

**■ ವಿದ್ಯಾ ವಿ. ಹಾಲಭಾವಿ**

